ಎರಡನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು

ಸಿ.ಮಿಸ್ಃ **42 /2017**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಶಿವಕುಮಾರಿ | ಪ್ರಾಸಾಃ **1** |
| ಗಂಡನ ಹೆಸರು | | ಶ್ರೀನಿವಾಸ್ ಆರ್ | |
| ವಯಸ್ಸು | | **29** | |
| ಕೆಲಸ | | ಗೃಹಿಣಿ | ಸಾ ಪ್ರ ಬೋ |
| ವಾಸ | | ನಂಜನಗೂಡು | ದಿಃ**27/02/2019** |

ಮುಖ್ಯ ವಿಚಾರಣೆ ಶ್ರೀ. ಎಸ್.ವಿ. ವಕೀಲರಿಂದಃ-

ದಿಃ27-06-2011 ರಂದು ಕೊಳ್ಳೆಗಾಲದ ಚೌಡೇಶ್ವರಿ ಕಲ್ಯಾಣ ಮಂಟಪದಲ್ಲಿ ಗುರು ಹಿರಿಯರ ಸಮಕ್ಷಮ ಹಿಂದೂ ಸಂಪ್ರಾದಾಯದಂತೆ ನನ್ನ ಮದುವೆ ಎದುರುದಾರರ ಜೋತೆ ನೆರವೆರಿರುತ್ತದೆ. ಮದುವೆ ಆದ ನಂತರ ನಾನು ನನ್ನ ಗಂಡನ ಜೋತೆ ಯಳಂದೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆ. ಸದರಿ ಬಾಡಿಗೆ ಮನೆಯಲ್ಲಿ ಎದುರುದಾರ ಅಕ್ಕ, ನನ್ನ ಗಂಡನ ಅಣ್ಣ ಮತ್ತು ಹೆಂಡತಿ ಮತ್ತು ನನ್ನ ಅತ್ತೆ ಇರುತ್ತಾರೆ. ಮದುವೆ ಆದ ಸ್ವಲ್ಪ ದಿನಗಳ ಕಾಲ ನನ್ನನ್ನು ಎದುರುದಾರರು ಅನೂನ್ಯವಾಗಿ ನೋಡಿಕೊಂಡಿರುತ್ತಾರೆ. ಆ ನಂತರ ಸಣ್ಣ-ಪುಟ್ಟ ವಿಚಾರಕ್ಕಾಗಿ ಎದುರುದಾರರು ನನ್ನ ಜೋತೆ ಜಗಳ ತೆಗೆದು ಒಡಿಬಡಿ ಮಾಡುತ್ತಿದ್ದರು ಮತ್ತು ನನ್ನ ಗಂಡನ ಮನೆಯವರು ಎಲ್ಲಾ ಸೇರಿ ನನಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ಸಹ ಕೊಡುತ್ತಿದ್ದರು.

2. ನನ್ನ ಮದುವೆ ಆದ 2 ವರ್ಷಗಳ ನಂತರ ನಮ್ಮಿಬ್ಬರ ದಾಂಪತ್ಯದ ಪಲವಾಗಿ ನಮಗೆ ಒಂದು ಗಂಡು ಮಗು ಜನಿಸಿರುತ್ತದೆ. ಸದರಿ ಮಗುವಿನ ಹೆಸರು ಲಕ್ಷ್ಮಿಕಾಂತ್ ಎಸ್. ಆಗಿರುತ್ತದೆ. ಆ ನಂತರ ನಾನು ಮತ್ತು ನನ್ನ ಗಂಡ ಹಾಗೂ ಆತನ ಕುಟುಂಬದವರು ಯಳಂದೂರಿನಿಂದ ಸಂತೆಮರಹಳ್ಳಿ ಟೀಚರ್ ಕಾಲೋನಿಗೆ ಬಂದು ನೆಲೆಸಿರುತ್ತೇವೆ. ಆ ನಂತರ ನನ್ನ ಗಂಡ ಒಂದು ನಿವೇಶನವನ್ನು ಖರೀದಿ ಮಾಡಿದ್ದು, ಸದರಿ ನಿವೇಶನದಲ್ಲಿ ಹೊಸ ಮನೆ ಕಟ್ಟುವ ಸಲುವಾಗಿ ನನ್ನ ತಂದೆಯ ಮನೆಯಿಂದ ಹೆಚ್ಚಿನ ಹಣ ತರುವಂತೆ ನನಗೆ ಪೀಡಿಸುತ್ತಿದ್ದ. ಆ ನಂತರ ನಮ್ಮ ತಂದೆ ಎದುರುದಾರರಿಗೆ ರೂ.1,50,000/- ಹಣವನ್ನು ಮನೆ ಕಟ್ಟುವ ಸಲುವಾಗಿ ಕೊಟ್ಟಿರುತ್ತಾರೆ. ಇಷ್ಟಾದರೂ ಸಹ ಇನ್ನೂ ಹೆಚ್ಚಿನ ಹಣ ಮತ್ತು ಒಡವೆ ತರುವಂತೆ ನನ್ನನ್ನು ಪೀಡಿಸುತ್ತಿದ್ದ. ನಮ್ಮ ಯಾಜಮಾನರು ಕಟ್ಟಿದ ಮನೆಯ ಗೃಹ ಪ್ರವೇಶ ಆದ ಮೇಲೆ ನನ್ನನ್ನು 3 ತಿಂಗಳು ಕಾಲ ಚೆನ್ನಾಗಿ

ಎದುರುದಾರರು ನೋಡಿಕೊಂಡಿರುತ್ತಾರೆ. ಆ ನಂತರ ನಾನು 2 ನೇ ಮಗುವಿಗೆ ಗರ್ಭಿಣಿ ಆದೆ. ಆಗ ಎದುರುದಾರರು ನಮಗೆ ಈಗ 2 ನೇ ಮಗು ಬೇಡ ಎಂದು ನನಗೆ ಗರ್ಭಪಾತ ಮಾಡಿಸಿರುತ್ತಾರೆ ಮತ್ತು ನನಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿರುತ್ತಾರೆ.

3. ಆ ನಂತರ ಎದುರುದಾರರು ನನ್ನನ್ನು ನನ್ನ ತವರು ಮನೆಗೆ ತಂದು ಬಿಟ್ಟಿರುತ್ತಾರೆ. ನೀನು ಸ್ವಲ್ಪ ಕಾಲ ಇಲ್ಲೇ ಇರು ನೀನು ಗರ್ಭಿಣಿ ಆಗಿರುವ ಕಾರಣ ಆಸ್ಪತ್ರೆಗೆ ಹೋಗಿ ಬರಬೇಕಾಗಿರುತ್ತದೆ. ಆ ನಂತರ ನಾನು ಕರೆದುಕೊಂಡು ಹೋಗುತ್ತೇನೆಂದು ಹೇಳಿ ಹೊರಟು ಹೋಗಿರುತ್ತಾರೆ. ಆ ನಂತರ ಒಂದು ತಿಂಗಳು ಕಳೆದರೂ ಎದುರುದಾರರು ನನ್ನನ್ನು ಕರೆದುಕೊಂಡು ಹೋಗಲು ಬರಲಿಲ್ಲ. ಆ ನಂತರ ನಾನು ನಮ್ಮ ತಂದೆ-ತಾಯಿಗಳ ಜೊತೆ ನನ್ನ ಗಂಡನ ಮನೆಗೆ ಹೋದೆ. ಆಗ ನಮ್ಮ ಸೋದರ ಬಾವ ಇದ್ದು ನೀವು ಇಲ್ಲಿಗೆ ಬರಬೇಡಿ ನೀವು ಯಳಂದೂರು ಮನೆಗೆ ಹೋಗಿ ಎಂದು ಹೇಳಿರುತ್ತಾರೆ. ಆ ನಂತರ ನಾನು ಯಳಂದೂರಿನ ಮನೆಗೆ ಹೋದೆವು. ಆ ಸಮಯದಲ್ಲಿ ಎದುರುದಾರರು ನನ್ನ ಮತ್ತು ನನ್ನ ತಂದೆ-ತಾಯಿಗಳ ಮೇಲೆ ಹಲ್ಲೆ ಮಾಡಿರುತ್ತಾರೆ. ಆ ನಂತರ ನಾವು ಸದರಿ ವಿಚಾರವಾಗಿ ಪೊಲೀಸ್ ದೂರನ್ನು ಕೊಡುವ ಸಲುವಾಗಿ ನಾವು ಯಳಂದೂರಿನ ಪೊಲೀಸ್ ಠಾಣೆಗೆ ಹೋದೆವು. ನಾವು ಪೊಲೀಸ್ ದೂರನ್ನು ನೀಡಿ ವಾಪಸ್ಸು ಬರಬೇಕಾದರೆ ನನ್ನ ಬಾವ ಚಂದ್ರಶೇಖರ್ ಮತ್ತು ಆತನ ಚಿಕ್ಕಪ್ಪ ರಾಮು ರವರು ದೂರನ್ನು ಏಕೆ ನೀಡಿದ್ದೀಯಾ ನಮ್ಮ ಮನೆ ಸಮಸ್ಯೆ ನಾವೇ ಪರಿಹರಿಸಿಕೊಳ್ಳಬೇಕೆಂದು ಹಿತವಚನ ಹೇಳಿರುತ್ತಾರೆ. ಆ ನಂತರ ನನ್ನನ್ನು ನನ್ನ ಗಂಡನ ಮನೆಗೆ ಕರೆದುಕೊಂಡು ಬಂದಿರುತ್ತಾರೆ. ಆದರೂ ಸಹ ಎದುರುದಾರರು ನನ್ನನ್ನು ಮನೆಯಲ್ಲಿ ಸೇರಿಸಿಕೊಳ್ಳಲು ನಿರಾಕರಿಸಿರುತ್ತಾರೆ. ಮುಂದುವರೆದು ಒಂದು ತಿಂಗಳ ನಂತರ ಎದುರುದಾರರು ನನ್ನನ್ನು ಮನೆಗೆ ಕರೆದುಕೊಂಡು ಹೋಗುತ್ತೇನೆಂದು ಹೇಳಿರುತ್ತಾರೆ. ಆ ನಂತರ ನಾನು ನನ್ನ ತಂದೆಯ ಮನೆಗೆ ಬಂದೆ. ನಮ್ಮ ಮಗುವನ್ನು ಎದುರುದಾರರು ಮನೆಯಲ್ಲಿಯೇ ಇರಿಸಿಕೊಂಡಿರುತ್ತಾರೆ.

4. ಆ ನಂತರ ನನಗೆ ಚಾಮರಾಜನಗರದ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಿಂದ ಒಂದು ಕೋರ್ಟ್ ನೋಟಿಸ್ ವಿವಾಹ ವಿಚ್ಛೇದನಕ್ಕಾಗಿ ಬಂದಿರುತ್ತದೆ. ಪ್ರಸ್ತುತ ಅರ್ಜಿಯು ವಿಚಾರಣೆ ಹಂತದಲ್ಲಿರುವಾಗ ನನಗೆ 2 ನೇ ಮಗು ಜನನ ಆಗಿರುತ್ತದೆ. ಸದರಿ ಮಗು ಮತ್ತು ನನ್ನನ್ನು ಎದುರುದಾರರು ಬಂದು ಯೋಗಕ್ಷೇಮ ವಿಚಾರಿಸಿರುವುದಿಲ್ಲ. ಆ ಮಗುವಿಗೆ ಹೃದಯ ಸಂಬಂಧಿ ಖಾಯಿಲೆ ಇರುತ್ತದೆ. ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಜಯದೇವ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವು. ಅಲ್ಲಿ ನಮ್ಮ ಕುಟುಂಬದ ರೇಷನ್ ಕಾರ್ಡ್ ಮತ್ತು ಆಧಾರ್ ಕಾರ್ಡ ನ್ನು ಕೇಳಿರುತ್ತಾರೆ. ಆದರೆ ಎದುರುದಾರರು ಸದರಿ ದಾಖಲೆಗಳನ್ನು ಕೊಡದ ಕಾರಣ ನಾವೇ ರೂ.2,00,000/- ಖರ್ಚು ಮಾಡಿ ಶಸ್ತ್ರ ಚಿಕಿತ್ಸೆ ಮಾಡಿಸಿದ್ದರೂ ಸಹ 9 ದಿನಗಳ ನಂತರ ಮಗು ಮರಣ ಹೊಂದಿರುತ್ತದೆ. ಆದರೂ ಕೂಡ ಮೃತ ಮಗುವನ್ನು ನೋಡಲು ಎದುರುದಾರರು ಬಂದಿರುವುದಿಲ್ಲ. ನನಗೆ ಜೀವನಾಂಶ ಮಾಡಲು ಯಾವುದೇ ಆದಾಯದ ಮೂಲ ಇಲ್ಲ. ಎದುರುದಾರರು ಸರ್ಕಾರಿ ಶಿಕ್ಷಕರಾಗಿರುವ ಕಾರಣ ಅವರಿಗೆ ಮಾಸಿಕ ರೂ.50,000/- ಸಂಬಳ ಬರುತ್ತಿದ್ದು ನನ್ನ

ಯೋಗಕ್ಷೇಮಕ್ಕಾಗಿ ತಿಂಗಳಿಗೆ ರೂ.30,000/- ಜೀವನಾಂಶ ಕೊಡುವಂತೆ ಮತ್ತು ನನಗೆ ಯಾವುದೇ ರೀತಿಯ ಕೌಟುಂಬಿಕ ದೌರ್ಜನ್ಯ ಮಾಡದಂತೆ ಪರಿಹಾರ ಕೊಡಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವನ್ನು ಕೋರಿದ್ದು ಮುಂದೂಡಲಾಯಿತು.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

ಎರಡನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು